ಮತ್ತು ಸ್ರ 1884ನೇ ಇಸವಿ ಮಾರ್ಚೀ 18ನೇ ತಾರೀಖಿನ ಬಾಬತು ರಿಸೀವರಾದ ಕೋರ್ಟು ನಾಜರ್ ಹೆಡ್ ಮುನಸಿ ನಂಜಪ್ಪ ನವರ ಸರಟಿಫಿಕೇಟ್ ಓದಲಾಯಿತು. ಇದೇ ವಿಷಯದಲ್ಲಿ ಸ್ರ 1883ನೇ ಇಸವಿ ಸೆಪ್ಟಂಬರ್ 3ನೇ ತಾರೀಖಿನಲ್ಲಿ ಈ ಕೋರ್ಟಿನಿಂದ ಮಾಡಲ್ಪಟ್ಟ ಹುಕ್ಕುಂ ವೇರಿಗೆ ಪಟ್ಟೀಯಲ್ಲಿ ಕಂಡ ಯಾವ ಸಾಲಗಾರರಿಗೂ ಐರ್ಜ ದಿವಾಳಿಯಾದವನ್ನ ಯಾಲ್ಲಾ ಜವಾಬುದಾರಿಯಿಂದಲೂ ನಿ ಖಾಲಸ್ಮಾಡಿರುವದಲ್ಲದೆ ಆ ಬಗ್ಗೆ ಸದರೀಯವನ್ನ ದಸ್ತಗಿರಿ ಮಾಡಿ ಕೈದು ಮಾಡುವದರ ದೆಸೇಯಿಂದಲೂ ಬಿಡಗಡೆಮಾಡಿ ಇರುವದಾಗಿ ಇದರಿಂದ ಹುಕ್ಕುಂ ಮಾಡಲ್ಪಟ್ಟು ಇದೆ.

ಸ್ರ 1884ನೇ ಇಸವಿ ಮಾರ್ಚೀ ತಿಂಗಳು 19ನೇ ತಾರೀಖಿನಲ್ಲಿ ಕೋರ್ಟು ಮೊಹರ್ ನಮ್ಮ ದಸ್ತಖತ್ತೊಹನೆ ಕೊಡೋಣಾಗಿದೆ.

ಬಿ. ತಿರುಮಲಾಚಾರ್,
ಸಬ್ ಜಡ್ಜ.

ತಾರೀಖು 26ನೇ ಮಾರ್ಚೀ 1884.

ಇದರಿಂದ ತಿಳಿಯಪಡಿಸುವದೇನಂದರೆ, ಮೂಡಿಗೆರೇ ತಾಲ್ಲೂಕು ಸಬ್ ರಿಜಿಸ್ಟ್ರಾರ್ ಆಫೀಸಿನಲ್ಲಿ ಬೇವಾರಸಾಗಿ ಯಿರತಕ್ಕ ಕೆಳಗೆ ವಿವರಿಸೋಣಾದ ದಸ್ತಾವೇಜನ್ನ ಹಾಜರ್ ಮಾಡಿದವರೇ ಆಗಲಿ ಅಥವಾ ವಾಪಸ್ ಪಡಿಯಲಿಕ್ಕೆ ಅವರಿಂದ ಕ್ರಮವಾದ ಅಧಿಕಾರ ಹೊಂದಿದ ಮುತಾಲೀಕ ಯಾ ಹಕ್ಕುದಾರರೆ ಆಗಲಿ ಈ ನೋಟೀಸ್ ತಾರೀಖು ಲಾಗಾಯತು ವಂದು ತಿಂಗಳ ವಳಗಾಗಿ ಸಬ್ ರಿಜಿಸ್ಟ್ರಾರ್ ರೂಬರೂಬ ಹಾಜರಾಗಿ ಅವನ್ನ ವಾಪಸು ತೆಗದುಕೊಳ್ಳಬೇಕು. ತಪ್ಪಿದರೆ ಸ್ರ 1877ನೇ ಇಸವಿ 3ನೇ ನಂಬರ್ ರಿಜಿಸ್ಟ್ರೇಷನ್ ಆಕ್ಟ್ 85ನೇ ಸೆಕ್ಷನ್ ಅನುಸರಿಸಿ, ಅದು ನಾಶಪಡಿಸಲ್ಪಡುವದು.

ದಸ್ತಾವೇಜು ನಂಬರ್.	ದಸ್ತಾವೇಜು ತಾರೀಖು.	ರಿಜಿಸ್ಟ್ರಾರ ತಾರೀಖು.	ದಸ್ತಾವೇಜನ್ನು ಬರಸಿ ಕೊಟ್ಟವರ ಹೆಸರು ಮತ್ತು ವಾಸಸ್ಥಳ.	ದಸ್ತಾವೇಜು ಬರಸಿಕೊಂಡವರ ಹೆಸರು.	ದಸ್ತಾವೇಜಿನ ಸ್ವಭಾವ ಮತ್ತು ಕಿಮ್ಮತ್ತು.
73 / 1881—82	15—2—82.	15—2—82	ಈರಮ್ಮ ಹೆಗ್ಗಡತಿ ನಿರ್ವಾಣಿ ಗಾಡನ ಪೆಂಡತಿ	ಗೊಣೀಬೀಡು ತಿಮ್ಮಶಟ್ಟಿ	95—12—0ಗೆ ತನ್ನ ಬಾಬತು 34ನೇ ನಂಬರ್ ಹುಲ್ಲು ಮನೇ ಬೀಡು ಮಾಡಿರುವದಾಗಿ.

ಮಹಮ್ಮದ್‌ಅಲ್ಲಿ,
ಫಾರ್ ರಿಜಿಸ್ಟ್ರಾರ್.

ಕ್ರಿಸ್ಟಲ್ಲೈಸ್ಡ್ ಸಿಂಕೋನಾ ಫೆಬ್ರಿಫ್ಯೂಜ್.

ಗವರ್ನಮೆಂಟ್ ಕೋಠಿಯಲ್ಲಿ ಕೆಂಪುವರ್ಣದ ಸಿಂಕೋನಾ ಪಟ್ಟೆಯಿಂದ ತಯಾರ್ ಮಾಡಲ್ಪಟ್ಟ ಹೊಸದಾದ ಮತ್ತು ಅಭಿವೃದ್ಧವಾದ ತಯಾರಿ—ಇದು ಸಾಧಾರಣವಾದ ಕ್ರಿಸ್ಟಲ್ಲೈಸ್ಡ್ ಅಲ್ಲದ ಫ್ಯೂಬ್ರಿಫ್ಯೂಜಿಗಿಂತ ಕ್ವಿನೈನಿಗೆ ಸಂಪೂರ್ಣವಾದ ಪ್ರತಿನಿಧಿಯಾಗಿದೆ. ಇದನ್ನು, ಕಲ್ಕತ್ತೆ ಬಿ॥ ಸೀಬ್‌ಪೋರ್ ಸಮೀಪದಲ್ಲಿ ರಾಯಲ್‌ಬೊಟಾನಿಕ್ ಗಾರ್ಡ್ ಸೂಪರ್‌ಟೆಂಡೆಂಟರಿಂದ ಗವರ್ನಮೆಂಟ್ ಆಫಿಸರ್‌ಗಳು ಸರ್ಕಾರಿಯಾದ ಮತ್ತು ಧರ್ಮಾರ್ಥವಾದ ಕೆಲಸಗಳಿಗಾಗಿ ಮತ್ತು ಬಂದು ಸಲಕ್ಕೆ ಇಪ್ಪತ್ತು ಪೌಂಡು ಮತ್ತು ಅದಕ್ಕೆ ಮೇಲ್ಪಟ್ಟು ತೆಗದುಕೊಳ್ಳುವರು ನಗದಿಗಾಗಿಯೇ ಪೌಂಡ್ ಬಂದಕ್ಕೆ 24 ರೂಪಾಯಿಗಳ ದರ ಪ್ರಕಾರ, ಕೊಂಡುಕೊಳ್ಳಬಹುದು. ರಾಯಲ್ ಬೊಟಾನಿಕ್ ಗಾರ್ಡ್ ಸೂಪರ್‌ಟೆಂಡೆಂಟರು ನಗದಿಗೇನೇ ಸಮುದಾಯವಾಗಿ ಪ್ರಜೆಗಳಿಗೆ ಮತ್ತು ಪೌಂಡ್ ಬಂದಕ್ಕೆ 32 ರೂಪಾಯಿಗಳ ಪ್ರಕಾರ ಮುಖ್ಯರಾದ ಯೂರೋಪಿಯರ್ ಮತ್ತು ನೇಟಿವ್ ಡಗ್ಗಿಸ್ಟ್‌ಗಳು ಸರಬರಾಯಿ ಮಾಡತಕ್ಕದ್ದು. ಟಪ್ಪಾಲ್ ಹಾಸಲ್ ಹನ್ನೆರಡಾಣೆ ಜಾಸ್ತಿ ಆಗ್ತದೆ.

Mysore Government Press, Bangalore.—1884.